ಸಾಕ್ಷಿಯನ್ನು ದಿಃ 13.06.2025. ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ. ಎಸ್.ಕೆ ರವರಿಂದಃ

ನಾನು ಒಬ್ಬಳೇ ಇದ್ದಾಗ ಆರೋಪಿಗೆ ಹಣವನ್ನು ಸಾಲವಾಗಿ ನೀಡಿರುತ್ತೇನೆ. ನನ್ನ ಮತ್ತು ಆರೋಪಿಯ ನಡುವೆ ಹಣಕಾಸಿನ ವ್ಯವಹಾರ ಆದಾಗ ಬೇರೆ ಯಾವ ಸಾಕ್ಷಿದಾರರೂ ಇರಲಿಲ್ಲ. ನಮ್ಮಿಬ್ಬರನ್ನು ಹೊರತುಪಡಿಸಿ ಬೇರೆ ಯಾರು ಆರೋಪಿಯಿಂದ ಚೆಕ್ ಅನ್ನು ಪಡೆಯುವ ಸಂದರ್ಬದಲ್ಲಿ ಇರಲಿಲ್ಲ. ನನ್ನ ದೂರಿನ 2 ಪುಟದ 3 ನೇ ಪ್ಯಾರದಲ್ಲಿ ಸಾಕ್ಷಿದಾರರ ಸಮಕ್ಷಮ ಚೆಕ್ ಅನ್ನು ನೀಡಲಾಯಿತು ಎಂದು ಬರೆಸಿರುವುದು ಸುಳ್ಳು ಎಂದರೆ ಸರಿ. ನಾನು ಆರೋಪಿಗೆ ದುಡ್ಡನ್ನು ನೀಡಿದೆ ಎನ್ನಲಾದ ಸಮಯದಲ್ಲಿ ನನ್ನ ಬಳಿ ಅಷ್ಟು ಹಣ ಇದ್ದ ಬಗ್ಗೆ ದಾಖಲಾತಿ ಇದೆ. ಸದರಿ ದಾಖಲಾತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ ಎಂದು ಉತ್ತರಿಸುತ್ತಾರೆ.

ದಿಃ29.08.2019 ರಲ್ಲಿ ಇದೇ ನ್ಯಾಯಾಲಯದಲ್ಲಿ ಒಂದು ಚೆಕ್ ಪ್ರಕರಣ ರಾಜೀ ಅಲ್ಲಿ ಅಂತ್ಯವಾಗಿದ್ದು ಅದರ ಮೊತ್ತ ನನ್ನ ಬಳಿ ಇತ್ತು. ಅದನ್ನೇ ನಾನು ಆರೋಪಿಗೆ ನೀಡಿರುತ್ತೇನೆ. ಸದರಿ ಪ್ರಕರಣದ ಸಂಖ್ಯೆ ನನಗೆ ಈಗ ನೆನಪಿಲ್ಲ. ರಾಜೀ ಯಿಂದ ಹಣ ಬಂದಿರುವ ಬಗ್ಗೆ ತೋರಿಸಲು ನನ್ನ ಬಳಿ ದಾಖಲಾತಿ ಇದೆ. ಆ ರೀತಿ ಬಂದ ಹಣ ನನ್ನ ಬಳಿ ಇತ್ತು ಎಂಬುದನ್ನು ನಾನು ನನ್ನ ದೂರಿನಲ್ಲಾಗಲೀ, ನೋಟೀಸಿನಲ್ಲಿ, ಮುಖ್ಯವಿಚಾರಣೆಯಲ್ಲಿ ತಿಳಿಸಿರುವುದಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಈ ಎಾಲ್ಲ ವಿಚಾರಗಳನ್ನು ನಾನು ನನ್ನ ವಕೀಲರಿಗೆ ತಿಳಿಸಿರುತ್ತೇನೆ. ದೂರಿನಲ್ಲಾಗಲೀ, ನೋಟೀಸಿನಲ್ಲಿ, ಮುಖ್ಯವಿಚಾರಣೆಯಲ್ಲಿ ಯಾಕೆ ಈ ಎಲ್ಲಾ ಮಾಹಿತಿಗಳನ್ನು ನಮೂದು ಮಾಡಿರುವುದಿಲ್ಲ ಎಂದು ನಾನು ವಕೀಲರನ್ನು ಕೇಳಿರುವುದಿಲ್ಲ. ಈ ಎಲ್ಲಾ ವಿಚಾರಗಳು ಸುಳ್ಳಾಗಿರುವುದರಿಂದ ದೂರಿನಲ್ಲಾಗಲೀ, ನೋಟೀಸಿನಲ್ಲಿ, ಮುಖ್ಯವಿಚಾರಣೆಯಲ್ಲಾಗಲೀ ನಾನು ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ಬ್ಯೂಟಿ ಪಾರ್ಲರ್ ನಡೆಸುತ್ತೇನೆ. ನನ್ನ ಆದಾಯ ತೋರಿಸಲು ದಾಖಲಾತಿ ಇದೆ. ನನ್ನ ಆದಾಯ ತೆರಿಗೆ ಯಲ್ಲಿ ಹಣ ಸಾಲ ನೀಡಿರುವ ವಿಚಾರವನ್ನು ನಮೂದು ಮಾಡಿರುತ್ತೇನೆ. ರಾಜಶೇಖರ ಗೌಡರ ಶಾಂತಲಿಂಗೇಶ್ವರ ಫೈನಾನ್ಸ್ ಅಲ್ಲಿ ಮೊದಲು ಕೆಲಸ ಮಾಡುತ್ತಿದ್ದೆ ಎಂದರೆ ಸರಿ. ನಾನು ಫೈನಾನ್ಸ್ ಅಲ್ಲಿ ಕೆಲಸ ಮಾಡುತ್ತಿದ್ದರಿಂದ, ಹಣ ಕೊಟ್ಟು ತೆಗೆದುಕೂಳ್ಳುವುದಕ್ಕೆ ಏನೆಲ್ಲಾ ದಾಖಲಾತಿಗಳನ್ನು ತೆಗೆದುಕೊಳ್ಳಬೇಕು ಎಂದು ನನಗೆ ಗೊತ್ತಿತ್ತು ಎಂದರೆ ಸರಿ. ಎಷ್ಟು ಮೊತ್ತದ ವರೆಗೆ ನಗದಾಗಿ ಹಣ ನೀಡಬಹುದು ಹಾಗೂ ಎಷ್ಟು ಮಾತ್ತದ ಮೇಲೆ ನಗದಾಗಿ ಕೊಡಲು ಬರುವುದಿಲ್ಲ ಎಂಬ ವಿಚಾರ ನನಗೆ ಗೊತ್ತಿದೆ ಎಂದರೆ ಸರಿ. ಹಣವನ್ನು ನಾನು ಕೊಟ್ಟ ದಿನವೇ

ಆರೋಪಿ ಚೆಕ್ ಅನ್ನು ನೀಡಿದ್ದರಿಂದ ಬೇರೆ ಯಾವ ದಾಖಲಾತಿಗಳನ್ನು ನಾನು ಪಡೆದುಕೊಂಡಿರುವುದಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

**ಓದಿ ಹೇಳಿ ಕೇಳಿ ಸರಿ ಇದೆ**

ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.